


## ಎಡದಿಂದ ಬಲಕ್ಕೆ:

1. ಆತ ನಡೆಸುತ್ತಿರುವ ಅವ್ಯವಹಾರಗಳು ನಿರಂತರ (4)
3. ಶರತ್ಕಾಲದಲ್ಲಿ ನೋಡಲು ಪ್ರಶಸ್ತವಾದ ಸಾಗರ ಗೊತ್ತೇ ? (3)
4. ರೇಶ್ಮೆ ವಸ್ತ್ರ ಧರಿಸಿ ಪ್ರತ್ಯಕ್ಷನಾದವನೇ ಲಕ್ಷ್ಮಿಯ ಒಡೆಯ (3)
6. ಸೋತವರಿಗೆ ಸ್ಫೂರ್ತಿ ತುಂಬಿದ್ದು ವಿದ್ಯಾ ದೇವತೆಯೇ ತಾನೇ ? (4)
7. ಮುಂದಿನ ಹಾದಿ ತೋರಿಸಿದ್ದು ಒರಿಸ್ಸಾದ ಪ್ರಸಿದ್ಧ ಭಾರೀ ಹೊಳೆ (4)
9. ವಜ್ರಾಯುಧ ಹಿಡಿದವರನ್ನೂ ಹೆದರಿಸಬಲ್ಲ, ಯಮ (4)
12. ಬಾಡಿಗೆ ಕೊಡಲು ಬಂದವರೆದುರು ಬರೀ ಒಣ ಜಂಬ (4)
14. ಚೆಲ್ಲಿದ್ದನ್ನು ಕಾಣಬಲ್ಲ ಕಣ್ಣೇ ಹಿಂದು ಮುಂದು (3)
15. ಗೋವುಗಳನ್ನು ಕಾಯಲು ಈ ಹಳ್ಳಿಯವನೇ ಸರಿ (3)
16. ಮಂಪರಿನಲ್ಲೇ ಕಾಲ ಕಳೆವಂತಾಗಿರುವುದು ಅವನದೇ ಕೃತ್ಯಗಳ ಪರಿಣಾಮ (4)

## ಮೇಲಿಂದ ಕೆಳಕ್ಕೆ :

1. ಧೂಪಾರತಿ ಮಾಡುತ್ತಿರುವವನೇ ಅವರೆಲ್ಲರ ಒಡೆಯ, ಅರಸ (4)
2. ತಮ್ಮಂದಿರ ನಡು ನಡುವೆಯೇ ಇದೆಂಥ ಮೇಲುಕೀಳು ವರ್ತನೆ ? (4)
3. ಶೋಕಿಲಾಲರ ಕೈಯಲ್ಲಿ ಇದೆಂಥ ಸಕ್ಕರೆ ? (3)
5. ನಾಶ ಮಾಡುವಂತಹ ಕೋಪ ಕಡೆಗೆ ಶಾಂತವಾಯಿತು (3)
6. ಸರೋಜ ಎಂದರೆ ಸರೋವರದಲ್ಲಿ ಹುಟ್ಟಿದ ತಾವರೆಯೇ ತಾನೇ ? (4)
8. ನಿತ್ಯವೂ ಹಗಲಿನ ಏಕೈಕ ಮೂಲ ಸೂರ್ಯನೇ ತಾನೇ ? (4)
10. ವಧೆ ಮಾಡಲು ಬಂದವನ ಮುಖ ನೋಡಿ (3)
11. ಆಕಾಶದಲ್ಲಿ ಎಲ್ಲಿದೆಯೋ ಏನೋ, ದೇವತೆಗಳ ಪ್ರಪಂಚ (4)
12. ಗಾಬರಿಗೊಳಿಸಿದ್ದು ಆ ವರ್ಷದ ಕ್ಷಾಮದ ಸಮಯ (4)
13. ವೈಚಾರಿಕತೆ ಏನಿಲ್ಲ, ಬರೀ ಮಾತುಗಾರ ಅಷ್ಟೇ (3)

### 05-10-2017ರ ಉತ್ತರಗಳು

ಎಡದಿಂದ ಬಲಕ್ಕೆ :
1. ಕಳೇಬರ 3.ಸಕಲ 4.ಸೀಮಿತ 6. ಶತಪದಿ 7. ಕಳುಹಿಸು 8. ತಕರಾರು 10. ಸಿಡಿಮಿಡಿ 12. ಕರಾಮತ್ತು 14. ಹುಡುಕಾಟ 16. ಗುಡಿಲು 17. ಪಾಲನೆ 18. ಸುಡುಹಾಲು

ಮೇಲಿಂದ ಕೆಳಕ್ಕೆ :
1. ಕಲಶ 2. ರಸೀದಿ 3. ಸನ್ನಿಹಿತ 5. ತಟಾಕ 7. ಕಸಿವಿಸಿ 9. ರುಷುವತ್ತು 11. ಮಿನುಗು 13. ಆರಾಧನೆ 14. ಹುಲುಸು 15. ಟಪಾಲು

# ಪಫಿನ್: ಏನು ವಿಶೇಷ?

ಪಫಿನ್. ಅದೊಂದು ಕಡಲ ಹಕ್ಕಿ. ಕಪ್ಪುಕಂದು ವರ್ಣಗಳ ಶರೀರ, ಕಿತ್ತಳೆ ಬಣ್ಣದ ಕಾಲುಗಳು, ಕೆಂಪುಕಪ್ಪು ಪಟ್ಟೆಗಳ ಕೊಕ್ಕು, ಬಣ್ಣದುಂಗುರಗಳಿಂದ ಪರಿವರಿಸಲ್ಪಟ್ಟ ಕಣ್ಣುಗಳು ( ಚಿತ್ರಗಳಲ್ಲಿ ಗಮನಿಸಿ ). ಇಂಥ ಲಕ್ಷಣಗಳೊಡನೆ ಒಟ್ಟಾರೆ ವಿದೂಷಕನ ಮುಖವಾಡ ಧರಿಸಿರುವಂತಹ ಶಿರ ! ಹಾಗಾದ್ದರಿಂದಲೇ ಈ ಹಕ್ಕಿಗೆ 'ಕಡಲ ವಿದೂಷಕ' ಎಂದೂ, 'ಕಡಲ ಗಿಣಿ' ಎಂದೂ ಹೆಸರುಗಳು ಕೂಡ. ಇನ್ನೂ ಒಂದು ವಿಶೇಷ ಏನೆಂದರೆ, ಪಫಿನ್ ಹಕ್ಕಿಗಳ ಶರೀರದ ಬಣ್ಣಗಳು ವಸಂತ ಕಾಲದಲ್ಲಿ ಗಾಢವಾಗುತ್ತವೆ ; ಚಳಿಗಾಲದಲ್ಲಿ ಪೇಲವಗೊಳ್ಳುತ್ತವೆ !




ಸರಿಸುಮಾರು ಪಾರಿವಾಳದ ಗಾತ್ರದ ಪಫಿನ್ ಹಕ್ಕಿಗಳು ಸಂತಾನಾಭಿವೃದ್ಧಿಯ ಕಾಲವನ್ನು ಬಿಟ್ಟು ವರ್ಷದ ಉಳಿದೆಲ್ಲ ಅವಧಿಯನ್ನೂ ಏಕಾಂಗಿಗಳಾಗಿ ಕಡಲಿನಲ್ಲೇ ಕಳೆಯುತ್ತವೆ. ಸಾಗರದಲ್ಲಿ ಈಜುತ್ತ, ಮುಳುಗಿ ಮೀನು ಹಿಡಿಯುತ್ತ, ಅದೆಲ್ಲ ಸಾಕಾದಾಗ ಕಡಲಿನ ಅಲೆಗಳ ಮೇಲೇ ಅವು ವಿಶ್ರಮಿಸುತ್ತವೆ, ನಿದ್ರಿಸುತ್ತವೆ. ನೀರಲ್ಲಿ ಎರಡು ನೂರು ಅಡಿ ಆಳದವರೆಗೂ ಮುಳುಗಿ, ಪ್ರತಿ ಬಾರಿಯೂ ಮೂವತ್ತು ಸೆಕೆಂಡ್ ನಷ್ಟು ಕಾಲ ನೀರೊಳಗೇ ಇದ್ದು ಬೇಟೆಯಾಡುವ ಪಫಿನ್ ಗಳಿಗೆ ಹೆರಿಂಗ್ ಮತ್ತು ಈಲ್ ಗಳಂತಹ ಪುಟ್ಟ ಮೀನುಗಳೇ ಪ್ರಧಾನ ಆಹಾರ. ಪಫಿನ್ ವೇಗದ ಹಾರಾಟಗಾರ ಕೂಡ. ಪ್ರತಿ ನಿಮಿಷಕ್ಕೆ ನಾಲ್ಕು ನೂರು ಬಾರಿ ರೆಕ್ಕೆ ಬಡಿಯುತ್ತ, ತಾಸಿಗೆ ಗರಿಷ್ಠ ಎಂಬತ್ತುತೊಂಬತ್ತು ಕಿಲೋ ಮೀಟರ್ ವೇಗದಲ್ಲಿ ಅದರ ಹಾರಾಟ !

ಪ್ರತಿ ವರ್ಷ ಏಪ್ರಿಲ್ ನಿಂದ ಆಗಸ್ಟ್ ವರೆಗಿನ ಅವಧಿಯಲ್ಲಿ ವಯಸ್ಕ ಪಫಿನ್ ಗಳು ಸಂತಾನಾಭಿವೃದ್ಧಿಗಾಗಿ ನೆಲಕ್ಕೆ ಬಂದಿಳಿಯುತ್ತವೆ. ಕಡಲಂಚಿನ ಕಡಿದಾದ ಬಂಡೆ ಗೋಡೆಗಳ ಮೇಲೆ ಮತ್ತು ದ್ವೀಪನಡುಗಡ್ಡೆಗಳ ಉನ್ನತ ಅಂಚುಗಳಲ್ಲಿ ಅಲ್ಲಲ್ಲಿ, ಅಲ್ಲಲ್ಲಿ ಹಲವಾರು ಸಾವಿರ ಸಂಖ್ಯೆಗಳಲ್ಲಿ ಗುಂಪು ಗುಂಪಾಗಿ ಸಂತಾನ ಜಾತ್ರೆ ನಡೆಸುತ್ತವೆ. ಪಫಿನ್ ಹೆಣ್ಣುಗಂಡುಗಳು ಸಾಮಾನ್ಯವಾಗಿ 'ಜೀವನ ಸಂಗಾತಿ'ಗಳಾಗಿ ಉಳಿಯುತ್ತವೆ ; ಒಮ್ಮೆ ಜೊತೆಗಾರರಾದ ಗಂಡುಹೆಣ್ಣುಗಳು ಪ್ರತಿ ವರ್ಷವೂ ಸಂತಾನ ಕಾಲದಲ್ಲಿ ಒಂದೇ ನೆಲೆಗೆ, ಒಂದೇ ಗೂಡಿಗೇ ಬಂದು ಪುನಃ ಸೇರುತ್ತವೆ. ಎರಡೂ ಸೇರಿ ನೆಲದಲ್ಲಿ ಒಂದು ಬಿಲ ಕೊರೆದು ಒಳ ಗೋಡೆಗೆಲ್ಲ ಚಿಗುರೆಲೆ, ಪುಕ್ಕ ಮತ್ತು ಕಡಲ ಕಳೆಗಳ ಮೆತ್ತಗಿನ ಪದರ ಹೊದಿಸುತ್ತವೆ. ಒಂದೇ ಒಂದು ಮೊಟ್ಟೆ ಇಟ್ಟು, ಕಾವು ಕೊಟ್ಟು ಮರಿ ಮಾಡುತ್ತವೆ. ತಂದೆ ತಾಯಿ ಎರಡೂ ಕಡಲಿಂದ ಮೀನುಗಳನ್ನು ಹಿಡಿದು ತಂದು ಮರಿಗೆ ಕೊಟ್ಟು ಸಾಕುತ್ತವೆ. ಪಫಿನ್ ಹೆಣ್ಣುಗಂಡುಗಳದು ಸಂಪೂರ್ಣ ಒಂದೇ ರೂಪ ; ಗಂಡಿನದು ಸ್ವಲ್ಪ ದೊಡ್ಡ ಗಾತ್ರ, ಅಷ್ಟೇ. ಪಫಿನ್ ಗಳ ಆಯುಷ್ಯ ಇಪ್ಪತ್ತು ವರ್ಷ.

ಪಫಿನ್ ಗಳಲ್ಲಿ ನಾಲ್ಕು ಪ್ರಭೇದಗಳಿವೆ : 'ಅಟ್ಲಾಂಟಿಕ್ ಪಫಿನ್, ಜುಟ್ಟಿನ ಪಫಿನ್, ಕೊಂಬಿನ ಪಫಿನ್ ಮತ್ತು ಗೇಂಡಾ ಪಫಿನ್'. ಇವುಗಳಲ್ಲೆಲ್ಲ ಅಟ್ಲಾಂಟಿಕ್ ಪಫಿನ್ ಗಳದೇ ಗರಿಷ್ಠ ಸಂಖ್ಯೆ; ಪ್ರಸ್ತುತ ಸಮೀಪ ಹದಿನೈದು ದಶಲಕ್ಷ. ಎಷ್ಟೇ ದೂರ ಇದ್ದರೂ, ಎಷ್ಟೇ ಅಜ್ಞಾತವಾಗಿ ಉಳಿದರೂ ಬಿಡದೆ ಬೇಟೆಯಾಡುವ ಮನುಷ್ಯರ ಹಾವಳಿಯಿಂದಾಗಿ ಕಳೆದ ಒಂದು ದಶಕದಿಂದ ಈ ಹಕ್ಕಿಗಳ ಜನಸಂಖ್ಯೆ ಕ್ಷಿಪ್ರವಾಗಿ ಕ್ಷೀಣಿಸತೊಡಗಿದೆ.

■ ಎನ್. ವಾಸುದೇವ್